**OS: 389-13** **PW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 22.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ-271, 278, 283 ರಿಂದ 285, 293, 297, 302, 307, 310, 312, 313, 169, 166, 274, 41, 83, 107, 110, 121, 139, 141, 146 ಹಾಗೂ 152 ಪರ ವಕೀಲರಿಂದ ಃ**

5. ದಾವೆ ಮಾಡಲು ಮಾಹಿತಿ ನಾನೇ ಕೊಟ್ಟಿದ್ದೇನೆ. ನಮ್ಮ ತಂದೆ ಮಲ್ಲೇಶಪ್ಪ ಹೂಗಾರ ಇವರದು ದೊಡ್ಡ ಕುಟುಂಬ ಅಂದರೆ ಸರಿ. ನಾನು 10 ನೇ ತರಗತಿವರೆಗೆ ಕಲಿತಿದ್ದೇನೆ. ನನ್ನ ಮದುವೆ 1991 ರಲ್ಲಿ ಆಗಿದೆ. ನನ್ನ ಮದುವೆಯಾದ ನಂತರ ನನ್ನ ತವರು ಮನೆಗೆ ಬಂದೆ ಇಲ್ಲ. ಈ ದಾವಾ ಆಸ್ತಿಗಳಲ್ಲದೆ ನಮ್ಮ ಮನೆತನಕ್ಕೆ ಸೇರಿದ ಇನ್ನು ಸುಮಾರು ಆಸ್ತಿಗಳು ಇವೆ ಅಂದರೆ ಸರಿ, ಆದರೆ ಪುನಃ ಹೇಳುತ್ತೇನೆ ಬೇರೆ ಆಸ್ತಿಗಳು ಇಲ್ಲ. ನಮಗೆ ಬೇರೆ ಆಸ್ತಿಗಳಿದ್ದರೂ ಸಹಿತ ಇಲ್ಲವೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಹಾಕುವ ಕಾಲಕ್ಕೆ ಏನೇನು ದಾಖಲೆಗಳನ್ನು ಕೊಟ್ಟಿದ್ದೇನೆಂದು ಮಾಹಿತಿ ಇದೆ.

6. ನಿಪಿ.9 ವಾಟ್ನಿ ಪತ್ರದ ಪ್ರಕಾರ ನಮ್ಮ ತಂದೆಯ ಕುಟುಂಬ ಬೇರೆ ಪ್ರದೇಶದಲ್ಲಿ ಸಾಕಷ್ಟು ಜಮೀನು ಹೊಂದಿದೆ ಅಂದರೆ ಸರಿಯಲ್ಲ. ಆ ಎಲ್ಲಾ ಆಸ್ತಿಗಳನ್ನು ದಾವಾ ಆಸ್ತಿ ಎಂದು ತೋರಿಸಲು ನನಗೆ ಯಾವುದೇ ತೊಂದರೆ ಇಲ್ಲ ಅಂದರೆ ಸರಿ.

7. ನನ್ನ ತಂದೆಯ ತಮ್ಮ ಬಸಪ್ಪ ಅಂದರೆ ಪ್ರತಿವಾದಿ-23 ಅಂದರೆ ಸರಿ. ನಮ್ಮ ತಂದೆ ಮತ್ತು ನಮ್ಮ ಕಾಕಾನಿಗೆ ದಾವಾ ಆಸ್ತಿಗಳಲ್ಲಿ ಸಮಪಾಲು ಇದೆ ಅಂದರೆ ಸರಿ. ನನ್ನ ಮದುವೆಗಿಂತ ಮೊದಲು ವಾದಿ-2 ರಿಂದ 4 ರವರ ಮದುವೆಯಾಗಿತ್ತು. ನನ್ನ ತಮ್ಮ ಪ್ರಕಾಶ ಮತ್ತು ರವಿ ಇವರ ಮದುವೆ ನನ್ನ ಮದುವೆಯಾದ ನಂತರ ಆಗಿದೆ. ನನ್ನ ಅಣ್ಣಂದಿರ ಮದುವೆ ನನ್ನ ಮದುವೆಗಿಂತ ಮೊದಲು ಆಗಿದೆ.

8. ನನ್ನ ಅಕ್ಕ ಶಾಂತವ್ವ ಇವಳ ವಿಳಾಸವನ್ನು ಕಾರವಾರ ರೋಡ, ಹುಬ್ಬಳ್ಳಿ ಎಂದು ತೋರಿಸಿದ್ದೇನೆ ಅಂದರೆ ಸರಿ. ನಾನು ಹುಟ್ಟಿ, ಬೆಳೆದು ಶಾಲೆ ವಗೈರೆ ಕಲಿತಿದ್ದು ಹುಬ್ಬಳ್ಳಿಯಲ್ಲಿ ಅಂದರೆ ಸರಿ.

**OS: 389-13** **PW-1**

9. ನಮ್ಮ ತಂದೆ ದಾವಾ ಆಸ್ತಿಯಲ್ಲಿ ತನಗೆ ಬಂದಂತಹ ಆಸ್ತಿಯಲ್ಲಿ ಸಣ್ಣ ಸಣ್ಣ ನಿವೇಶನಗಳನ್ನಾಗಿ ಮಾಡಿ ಮಾರಾಟ ಮಾಡಿದ್ದಾರೆ ಅಂದರೆ ಸರಿಯಲ್ಲ. ನಾನು ಸುಮಾರು 70-80 ಪ್ರತಿವಾದಿಗಳ ಜೊತೆ ಇದೇ ದಾವೆಯಲ್ಲಿ ರಾಜಿಯಾಗಿ ಸುಮಾರು 43 ಲಕ್ಷ ರೂ. 30 ಸಾವಿರ ರೂ.ಗಳ ಹಣ ಪಡೆದುಕೊಂಡಿದ್ದೇನೆ ಅಂದರೆ ಸರಿ. ಆದರೆ ಅಷ್ಟೊಂದು ಹಣ ಪಡೆದಿಲ್ಲ. ದಾವಾ ಆಸ್ತಿಯಲ್ಲಿ ನನಗೆ ಬರತಕ್ಕಂತಹ ಹಿಸ್ಸೆಗಿಂತ 10 ಪಟ್ಟು ಹಿಸ್ಸೆದಷ್ಟು ಹಣ ನಾನು ಪಡೆದಿರುತ್ತೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 320 ಮನೆಗಳು ಇವೆ ಅಂದರೆ ಸರಿ. ಆ ಮನೆಗಳಿಗೆ ರಸ್ತೆ, ನಳ, ಮತ್ತು ಕರೆಂಟ್ ವ್ಯವಸ್ಥೆಗಳು ಇವೆ ಅಂದರೆ ಸರಿ. ಅದನ್ನು ಆ ಪ್ಲಾಟಗಳನ್ನು ಖರೀದಿಸಿದವರು ಬೇಕಾಯ್ದೆಶೀರ ಮಾಡಿಸಿಕೊಂಡಿದ್ದಾರೆ. ಆ ಪ್ಲಾಟುಗಳನ್ನು ಖರೀದಿಸಿದವರು ಅವುಗಳ ಕರವನ್ನು ತುಂಬುತ್ತಾ ಬಂದಿದ್ದಾರೆ ಅವರು ಬೇಕಾಯ್ದೆಶೀರ ತುಂಬುತ್ತಿದ್ದಾರೆ. ಅವರು ಕಾಯ್ದೆ ಬದ್ಧವಾಗಿ ಮಹಾನಗರ ಪಾಲಿಕೆಯಿಂದ ನಳದ ಪರವಾನಿಗೆ, ಒಳಚರಂಡಿ ಪರವಾನಿಗೆ ವಗೈರೆ ಪಡೆದಿದ್ದಾರೆ ಅಂದರೆ ಸರಿಯಲ್ಲ. ನನ್ನ ತಂದೆ ತನ್ನ ಪಾಲಿಗೆ ಬಂದ ಜಮೀನುಗಳಲ್ಲಿ ಅಕ್ರಮ-ಸಕ್ರಮ ಪ್ಲಾಟು ಮಾಡಿ ಮಾರಾಟ ಮಾಡಿ ಹಣ ಪಡೆದಿದ್ದಾರೆ ಅಂದರೆ ಸರಿಯಲ್ಲ. ನಮ್ಮ ತಂದೆ ತನ್ನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮತ್ತು ತನ್ನ ಮಕ್ಕಳ ಮದುವೆ ಸಲುವಾಗಿ ಮತ್ತು ದೈನಂದಿನ ಖರ್ಚಿನ ಸಲುವಾಗಿ ಹಣ ಪಡೆದು ಸುಮಾರು ಪ್ಲಾಟುಗಳನ್ನು ಮಾರಾಟ ಮಾಡಿದ್ದಾರೆ ಅಂದರೆ ಸರಿಯಲ್ಲ. ಆ ವಿಷಯ ನನಗೆ ಗೊತ್ತಿದ್ದರೂ ಸಹಿತ, ಈಗ ಪ್ರತಿವಾದಿಗಳಿಂದ ಇನ್ನಷ್ಟು ಹಣ ವಸೂಲಿ ಮಾಡಲು ಸುಳ್ಳು ಕೇಸ್‌ನ್ನು ಹಾಕಿದ್ದೇನೆ ಅಂದರೆ ಸರಿಯಲ್ಲ.

**OS: 389-13** **PW-1**

10. ನಮ್ಮ ತಂದೆ ಮತ್ತು ಆತನ ಸಹೋದರರ ನಡುವೆ ಮೊದಲೇ ವಾಟ್ನಿಯಾಗಿದೆ ಅಂದರೆ ಸರಿ. ಆ ಪ್ರಕಾರ ಉತಾರಗಳಲ್ಲಿ ಅವರ ಹೆಸರು ಇವೆ ಅಂದರೆ ಸರಿ. ಆದರೆ ನಮ್ಮ ತಂದೆ ಮತ್ತು ಆತನ ಮಕ್ಕಳ ನಡುವೆ ಹಿಸ್ಸೆಯಾಗಿಲ್ಲ. ನಮ್ಮ ನಡುವೆ ಹಿಸ್ಸೆಯಾಗಿ ಅದರಂತೆ ಉತಾರಗಳಲ್ಲಿ ಹೆಸರು ಬಂದಿವೆ ಅಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಕೇಳಿದ ಹಿಸ್ಸೆ ಈಗಾಗಲೇ ನಾನು ರಾಜಿ ಮೂಲಕ ಪಡೆದಿರುತ್ತೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.